**ಪ್ರತಿವಾದಿ ನಂ.1 ಇವರು ಸಲ್ಲಿಸಿದ ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿಃ *19/01/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಮುಂದುವರೆದ ಪಾಟೀ ಸವಾಲು : 1 ನೇ ಪ್ರತಿವಾದಿ ಪರ ವಕೀಲರಿಂದ.***

ವಾದಿಯಾದ ನನ್ನ ಅಕ್ಕನ ಗಂಡ ನಾರಾಯಣ ಇವರು 1984 ರಲ್ಲಿ ತೀರಿಹೋದರು ಎಂದರೆ ನಿಜ. ನನ್ನ ಅಕ್ಕನ ಇನ್ನೊಬ್ಬ ಮಗ ನೇಮಿನಾತ ನನ್ನ ಅಕ್ಕನ ಜೊತೆಗೆ ವಾಸವಿದ್ದನು ಎಂದರೆ ನಿಜ. ನನ್ನ ಮಾವ ತೀರಿಹೋದ ನಂತರ ಬಂದಿರುವ ಸೇವಾಸೌಲಭ್ಯಗಳನ್ನು ಪ್ರತಿವಾದಿ ನಂ.2 ಮತ್ತು 3 ಇವರು ಸಹ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಕ್ಕ ಸದರಿ ಸೇವಾಸೌಲಭ್ಯದ ಹಣ ಏನೂ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಮದುವೆಯ ಪೂರ್ವದಲ್ಲಿ 1994 ರಲ್ಲಿ ಸುಮನ ಇವರ ಮದುವೆಯಾಗಿತ್ತು ಎಂದರೆ ನಿಜ. ನಂತರ ನನ್ನ ಮತ್ತು ಪ್ರತಿವಾದಿ ನಂ.3 ಮದುವೆ 1995 ರಲ್ಲಿ ಆಗಿತ್ತು ಎಂದರೆ ನಿಜ. ನನ್ನ ಅಕ್ಕ ತನ್ನ ಮಗ ರಮೇಶ ಸಾಯುವ ಪೂರ್ವದಲ್ಲಿ ಧಾರವಾಡದಲ್ಲಿ ವಾಸವಿರುವ ಕುರಿತು ದಾಖಲೆ ಹಾಜರುಪಡಿಸಿಲ್ಲ, ಮುಂದೆ ಮಾಡುತ್ತೇನೆ. ಅವರ ಮನೆತನದ ಅಡಚಣೆ ಸಲುವಾಗಿ ಸದರಿ ರಮೇಶ ತನ್ನ ಚಿಕ್ಕಮ್ಮ ಬಂಗಾರವನ್ನು ಒತ್ತು ಹಾಕಿ ಸಾಲವನ್ನು ತಂದಿದ್ದಾ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಂಗಾರವನ್ನು ಕೊಡಿಸಬೇಕಯಿ ನಾನು ಮತ್ತು ನನ್ನ ಅಕ್ಕ ರಮೇಶನಿಗೆ ಪದೇ ಪದೇ ಹೇಳುತ್ತಿದ್ದೇವು ಎಂದರೆ ಸರಿಯಲ್ಲ. ರಮೇಶ ತೀರಿಹೋದ ನಂತರ ಅವರ ಪತ್ನಿ ಸದರಿ ಬಂಗಾರದ ಸಾಲವನ್ನು ತುಂಬಿ ಬಂಗಾರವನ್ನು ಚಿಕ್ಕಮ್ಮನಿಗೆ ವಾಪಸ್ಸು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇದನ್ನು ಹೊರತುಪಡಿಸಿ ರಮೇಶ ಬೇರೆ ಯಾವ ಸಾಲ ಪಡೆದಿದ್ದಾ ಎಂದು ನನಗೆ ಗೊತ್ತಿಲ್ಲ.

ರಮೇಶ ಕಾರು ಖರೀದಿ ಮಾಡಲು 2017 ಡಿಸೆಂಬರನಲ್ಲಿ ರೂ.5,50,000/- ಸಾಲ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ. 2018 ನೇ ಇಸ್ವಿಯಲ್ಲಿ ರಮೇಶ ತೀರಿಹೋದ ನಂತರ ಎಷ್ಟು ಸಾಲವಿದೆ ಎಂದು ನಾವು ವಿಚಾರಿಸಿಲ್ಲ. ಸದರಿ ಕಾರಿನ ಮೇಲೆ ರೂ.5,12,585/- ಸಾಲ ಬಾಕಿ ಉಳಿದಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ರಮೇಶ ಮಾಡಿರುವ ಎಲ್ಲ ಸಾಲದ ಬಗ್ಗೆ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ವಾದ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ರಮೇಶ ಸಾಯುವ ಕಾಲಕ್ಕೆ ಮನೆ ಕಟ್ಟುವ ಸಲುವಾಗಿ ಪಡೆದುಕೊಂಡ ಸಾಲ ಬಾಕಿ ಉಳಿದಿತ್ತು ಎಂದರೆ ಸಾಕ್ಷಿದಾರರು ಈಗಲೂ ಸಹ ಬಾಕಿ ಇದೆ ಎಂದು ಉತ್ತರಿಸಿರುತ್ತಾರೆ. ಸದರಿ ಸಾಲದ ಬಾಕಿಯೂ ಸಹ ನಾನು ಉದ್ದೇಶಪೂರ್ವಕವಾಗಿ ವಾದಪತ್ರದಲ್ಲಿ ತೋರಿಸಿಲ್ಲ ಎಂದರೆ ಸದರಿ ಸಾಲ ಸಹ

ಪಾಲು ಆಗಲಿ ಎಂದು ಹೇಳುತ್ತಾರೆ. ಚಂದ್ರಾಬಾಯಿ ಹತ್ತಿರ ಇರುವ ಬಂಗಾರ ದಾವೆಯಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿದಾರರು ಬಂಗಾರವಿಲ್ಲ ಎಂದು ಹೇಳುತ್ತಾರೆ.

ನನ್ನ ಅಕ್ಕನಿಗೆ ನನ್ನ ಮಾವ ತೀರಿಹೋದ ನಂತರ 15 ಸಾವಿರ ರೂಪಾಯಿ ಪಿಂಚಣಿ ಬರುತ್ತಿತ್ತು ಎಂದರೆ ನಿಜ. ಸದ್ಯಕ್ಕೆ 6-7 ಸಾವಿರ ರೂಪಾಯಿ ಪಿಂಚಣಿ ಬರುತ್ತದೆ. ನನ್ನ ಪತ್ನಿಗೆ ಮತ್ತು ಪತ್ನಿಯ ಸಹೋದರಿಯರಿಗೆ ಈ ರೀತಿ ಮನೆತನದ ಎಲ್ಲ ಆಸ್ತಿಗಳು ಮತ್ತು ಉತ್ಪನಗಳ ಪಾಲು ಕೊಡಬೇಕೆಂದು ನನ್ನ ಅಕ್ಕನೊಂದಿಗೆ ಒತ್ತಾಯಪೂರ್ವಕವಾಗಿ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪಿಂಚಣಿಯಲ್ಲಿ ಸಹ 10 ಸಾವಿರ ರೂಪಾಯಿ ಕೊಡಬೇಕೆಂದು ಒತ್ತಾಯಿಸದ್ದೇವೆ ಎಂದರೆ ಸರಿಯಲ್ಲ. ಈ ರೀತಿ ಕೊಡಲಿಲ್ಲ ಎಂದರೆ ಅನುಕಂಪದ ಅಧಾರದ ಮೇರೆಗೆ ಬರುವ ನೌಕರಿಗೆ ಸಹ ಅಡಚಣೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದೇವೆ ಎಂದರೆ ಸರಿಯಲ್ಲ.

ಮನೆಯನ್ನು ಬಾಡಿಗೆ ಕೊಟ್ಟಿದ್ದು, ಸದರಿ ಬಾಡಿಗೆ ಎಷ್ಟು ಬರುತ್ತದೆ ಎಂದು ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ನಿಜ. ರಮೇಶ ತೀರಿಹೋದ ನಂತರ ಸದರಿ ಬಾಡಿಗೆಯನ್ನು ನಾನೇ ಪಡೆದುಕೊಳ್ಳುತ್ತಿದ್ದೇನೆ ಎಂದರೆ ನಿಜ. ಸದರಿ ಆಸ್ತಿಗಳು ರಮೇಶನ ಸ್ವಂತ ಆಸ್ತಿಗಳು ಇದ್ದರೂ ಸಹ ನನ್ನ ಅತ್ತೆಗೆ ಪ್ರಚೋದನೆ ಮಾಡಿ ಅದರಿಂದ ಬರುವ ಆದಾಯವನ್ನು ನಾವೇ ತೆಗೆದುಕೊಳ್ಳುವ ದುರುದ್ದೇಶದಿಂದ ಈ ರೀತಿ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹೂಡಿರುತ್ತೇವೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ರಮೇಶ ತೀರಿಹೋಗುವ ಕಾಲಕ್ಕೆ ಒಟ್ಟು ಕುಟುಂಬವಿರಲಿಲ್ಲ ಎಂದರೆ ಸರಿಯಲ್ಲ. ರಮೇಶ ತೀರಿಹೋದ ನಂತರ ಅವರ ಹೆಂಡತಿಯನ್ನು ಹೊರಗೆ ಹಾಕಿ ವಾದಿಯನ್ನು ಅದರಲ್ಲಿ ಇರಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಮತ್ತು 3 ಇವರಿಗೆ ಯಾವುದೇ ರೀತಿ ಪಾಲು ಬರುವುದಿಲ್ಲ ಎಂದು ಗೊತ್ತಿದ್ದರೂ ಸಹ ಅವರನ್ನು ಪಕ್ಷಗಾರರನ್ನಾಗಿ ಮಾಡಿ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.